<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ,</u>
<u>ನಂಜನಗೂಡು</u>

<u>ಸಿಸಿ ಸಂಖ್ಯೆ **: 952/2021**</u>

ಪಿರ್ಯಾದಿ : ಹೆಚ್.ಎಸ್. ಮಹದೇವಸ್ವಾಮಿ ಬಿನ್ ಶಿವಣ್ಣ – **58** ವರ್ಷ,
ವಾಸ – ಎಸ್. ಹೊಸಕೋಟೆ ಗ್ರಾಮ,
ಚಿಕ್ಕಯ್ಯನ ಛತ್ರ ಹೋಬಳಿ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿ : ಕೆ.ಬಿ. ಮಾಯಪ್ಪ ಬಿನ್ ಲೇಟ್ ಕೆ.ಎಸ್. ಬಸವಣ್ಣ – **53** ವರ್ಷ,
<u>ಖಾಯಂ ವಿಳಾಸ</u> - ಕೇತಹಳ್ಳಿ ಗ್ರಾಮ, ಮೂಗೂರು ಹೋಬಳಿ,
ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.
<u>ತಾತ್ಕಾಲಿಕ ವಿಳಾಸ</u> - ಮಹದೇಶ್ವರ ಹಾರ್ಡ್ ವೇರ್ ಮುಂಭಾಗ,
ಮೈಸೂರು ಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶ</u>

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ಫಿರ್ಯಾದುದಾರರಾದ ಹೆಚ್.ಎಸ್. ಮಹದೇವಸ್ವಾಮಿ ಇವರಿಗೆ ಆರೋಪಿತರಾದ ತಾವು ಪರಿಚಿತರಾಗಿದ್ದು, ತಾವು ಭತ್ತದ ಫಸಲನ್ನು ಖರೀದಿ ಮಾಡಿಸುವ ದಲ್ಲಾಳಿ ವೃತ್ತಿ ಮಾಡುತ್ತಿದ್ದು, ಈ ಸಂಬಂಧ ತಾವು ಫಿರ್ಯಾದುದಾರರಿಂದ ಖರೀದಿ ಮಾಡಿದ ಭತ್ತದ ಬಾಬ್ತು ರೂ.90,00,000/- ಹಣದ ಪೈಕಿ ಆರೋಪಿತರಾದ ತಾವು ಫಿರ್ಯಾದುದಾರರಿಗೆ ರೂ.53,44,000/- ಹಣವನ್ನು ಪಾವತಿ ಮಾಡಿದ್ದು , ಉಳಿಕೆ ಹಣ ರೂ.36,56,000/- ಗಳನ್ನು ತಾವು ಫಿರ್ಯಾದುದಾರರಿಗೆ ಪಾವತಿ ಮಾಡುವ ಸಲುವಾಗಿ ನೀವು ದಿನಾಂಕ 23.12.2020 ರಂದು ಕೊಟ್ಯಾಕ್ ಮಹೀಂದ್ರ ಬ್ಯಾಂಕ್ , ಟಿ. ನರಸೀಪುರ ಶಾಖೆ , ಟಿ. ನರಸೀಪುರ ಬ್ಯಾಂಕಿನ ಚೆಕ್ ಸಂಖ್ಯೆ 000314 ರೂ.37,00,000/- ಕ್ಕೆ ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ನಂಜನಗೂಡು ತಾಲ್ಲೂಕಿನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಹದಿನಾರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಗ್ರಾಹಕರ ಸಹಿಯಲ್ಲಿ ವ್ಯತ್ಯಾಸವಿದೆ ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸ್ಸಾಗಿದ್ದು ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 28.01.2021 ರಂದು ನೋಟೀಸನ್ನು ಜಾರಿಗೊಳಿಸಿದ್ದು , ಸದರಿ ನೋಟೀಸಿಗೆ ಆರೋಪಿತರಾದ ತಾವು ಸಮಂಜಸವಲ್ಲದ ಉತ್ತರವನ್ನು ನೀಡಿದ್ದು

**ಮತ್ತು ಚೆಕ್ಕಿನ ಹಣವನ್ನು** ಪಾವತಿಸಿರುವುದಿಲ್ಲ. ಆದ್ದರಿಂದ ನೀವು ಲಿಖಿತ ವರ್ಗಾವಣೆಯ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ **ಮೇಲೆ ಆರೋಪಣೆ ಇರುತ್ತದೆ.**

ಪ್ರಶ್ನೆಃ **1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೆ ?**

ಆರೋಪಿ ಉತ್ತರ :

ಪ್ರಶ್ನೆಃ 2 ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರ :

ಮೇಲ್ಕಂಡ ಅಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ 28.06.2023 ರಂದು ದೃಢೀಕರಿಸಿದ್ದೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ.,
**ನಂಜನಗೂಡು.**